ಕನ್ನಡ ವಿಶ್ವವಿದ್ಯಾಲಯ, ಹಂಪಿ
ದೂರಶಿಕ್ಷಣ ನಿರ್ದೇಶನಾಲಯ
ವಿದ್ಯಾರಣ್ಯ 583276, ಹೊಸಪೇಟೆ ತಾಲ್ಲೂಕು, ಬಳ್ಳಾರಿ ಜಿಲ್ಲೆ

ಸಂಖ್ಯೆ:ಕವಿಹಂ:ದೂಶಿನಿ:17:ನಮೂನೆ:2020–21 ದಿನಾಂಕ: 23.10.2020

# ಎಂ.ಎ. ಕನ್ನಡ ಅಂತಿಮ ವರ್ಷದ ಗೃಹಲೇಖನ ಪ್ರಶ್ನೆಪತ್ರಿಕೆ 2019–20

*ವಿದ್ಯಾರ್ಥಿಗಳ ಸೂಚನೆಗಳನ್ನು ಪ್ರತ್ಯೇಕವಾಗಿ ಹೊರಡಿಸಲಾಗಿದೆ. ಅದನ್ನು ಗಮನವಿಟ್ಟು ಓದಿಕೊಂಡು ಈ ಕೆಳಗಿನ ಪ್ರಶ್ನೆಗಳಿಗೆ ಗೃಹಲೇಖನ/ಸಂಪ್ರಬಂಧಗಳನ್ನು ಸಿದ್ಧಪಡಿಸಿ ಸಲ್ಲಿಸಲು ಸೂಚಿಸಿದೆ.*

ಗೃಹಲೇಖನ/ಸಂಪ್ರಬಂಧದ ವಿಷಯಗಳು (ಪ್ರತಿ ಪತ್ರಿಕೆಯಲ್ಲಿಯೂ ಎರಡು ವಿಷಯಗಳ ಕುರಿತು ಕಡ್ಡಾಯವಾಗಿ ಗೃಹಲೇಖನ/ಸಂಪ್ರಬಂಧ ಸಿದ್ಧಪಡಿಸಬೇಕು.)

## ಕೋರ್ಸ್–17ಎಫ್(ಪತ್ರಿಕೆ) – 6 : ಆಧುನಿಕ ಕನ್ನಡ ಕಾವ್ಯ

1. ಆಧುನಿಕ ಕನ್ನಡ ಕಾವ್ಯ ಹುಟ್ಟಿದ ಸಂದರ್ಭ ಹಾಗೂ ಹಿನ್ನೆಲೆಯನ್ನು ವಿವರಿಸಿ.
2. ನವೋದಯ ಸಾಹಿತ್ಯದಲ್ಲಿ ರಾಷ್ಟ್ರೀಯ ಪ್ರಜ್ಞೆ ಹಾಗೂ ಸಾಮಾಜಿಕ ಕಳಕಳಿಗಳು ಹೇಗೆ ವ್ಯಕ್ತವಾಗಿವೆ? ವಿವರಿಸಿ.
3. ದಲಿತ ಬಂಡಾಯ ಕಾವ್ಯಕ್ಕೆ ಒದಗಿದ ಪ್ರಮುಖ ಪ್ರೇರಣೆಗಳನ್ನು ಪರಿಶೀಲಿಸಿ.
4. ಬೇಂದ್ರೆಯವರ ಸಾಮಾಜಿಕ ಕವಿತೆಗಳ ವಿಭಿನ್ನ ನೆಲೆಗಳನ್ನು ಕುರಿತು ಚರ್ಚಿಸಿ.

## ಕೋರ್ಸ್–17ಜಿ(ಪತ್ರಿಕೆ) – 7 : ಆಧುನಿಕ ಕಥನ ಸಾಹಿತ್ಯ

1. ಪ್ರಗತಿಶೀಲ ಪಂಥ ಕಾದಂಬರಿ ಪ್ರಕಾರಕ್ಕೆ ಕೊಟ್ಟ ಕೊಡುಗೆಗಳನ್ನು ವಿವರಿಸಿ.
2. ಅನುಪಮ ನಿರಂಜನ ಕತೆಯಲ್ಲಿ ಬರುವ ಬಡ ಕುಟುಂಬದ ಬವಣೆಗಳನ್ನು ವಿವರಿಸಿ.
3. "ತಬರನ ಕತೆ"ಯಲ್ಲಿ ಪೆನ್‌ಶನ್ ಹಣವನ್ನು ಪಡೆಯುವ ಸಲುವಾಗಿ ತಬರನು ಪಟ್ಟ ಶ್ರಮವನ್ನು ಕುರಿತು ಚರ್ಚಿಸಿ.
4. "ಅಮಾಸ ಕತೆ"ಯಲ್ಲಿ ಅನಾವಣಗೊಂಡಿರುವ ಅಮಾಸನ ವ್ಯಕ್ತಿತ್ವವನ್ನು ಕುರಿತು ಚರ್ಚಿಸಿ.

## ಕೋರ್ಸ್–17ಎಚ್(ಪತ್ರಿಕೆ) – 8 : ಆಧುನಿಕ ಕನ್ನಡ ನಾಟಕಗಳು

1. ರಂಗಭೂಮಿಯ ಮುಖ್ಯ ಮಾಧ್ಯಮ ಯಾವುವು? ನಾಟ್ಯಶಾಸ್ತ್ರ ಆಧರಿಸಿ ಬರೆಯಿರಿ.
2. ನಾಗರೀಕರಣದ ಪರಿಣಾಮವಾಗಿ ಕಾಡುಕುರುಬರ ಸಂಸ್ಕೃತಿಯೊಂದು ವಿಘಟನೆಗೆ ಒಳಗಾದುದರ ಚಿತ್ರಣ 'ಕಾಕನಕೋಟೆ' ನಾಟಕದಲ್ಲಿ ಹೇಗೆ ವ್ಯಕ್ತಗೊಂಡಿದೆ?
3. ನಾಟಕ ಕಲೆ ಮತ್ತು ಜೀವನ ಸಂಬಂಧಗಳನ್ನು ಸಾದೃಶ್ಯ ನಾಟಕದಲ್ಲಿ ಚಿತ್ರಿತವಾಗಿರುವ ಬಗೆಯನ್ನು ಪರಿಶೀಲಿಸಿ.
4. ಶೂದ್ರತಪಸ್ವಿ ಕತೆಯ ಹಿಂದಿರುವ ವರ್ಣಭ್ರಾಂತಿಯ ಮನೋಧರ್ಮವನ್ನು ಪರಿಚಯಿಸಿ.

## ಕೋರ್ಸ್–17ಐ(ಪತ್ರಿಕೆ) – 9 : ಆಧುನಿಕ ಭಾರತೀಯ ಸಾಹಿತ್ಯ

1. "ವಿಚಾರಗಳ ಪ್ರತಿಪಾದನೆಗಾಗಿ ಪಾತ್ರಗಳ ನಿರ್ಮಿತಿ" ಎನ್ನುವುದನ್ನು ಕಮಲೆಯ ಪಾತ್ರ ಹೇಗೆ ಪ್ರತಿನಿಧಿಸುತ್ತದೆ?
2. ಸ್ತ್ರೀವಾದ ಎಂದರೇನು? ಈ ಕಾದಂಬರಿಯನ್ನು ಸ್ತ್ರೀವಾದದ ಹಿನ್ನೆಲೆಯಲ್ಲಿ ವಿಮರ್ಶಿಸಿ.
3. ಯಯಾತಿ ಒಂದು ಪೌರಾಣಿಕ ಕಥೆ ಹೊಂದಿಯೂ ವರ್ತಮಾನವನ್ನು ಹೇಗೆ ಧ್ವನಿಸುತ್ತದೆ? ವಿವರಿಸಿ.
4. ತೋಟಿಯ ಮಗ ಕಾದಂಬರಿಯ ವರ್ಗ ಸಂಘರ್ಷದ ಸ್ವರೂಪವನ್ನು ಚಿತ್ರಿಸಿ.

## ಕೋರ್ಸ್–17ಜೆ(ಪತ್ರಿಕೆ) – 10 : ಆಧುನಿಕ ಕನ್ನಡ ಸಾಹಿತ್ಯ : ಆಯ್ದ ಕೃತಿಗಳು

1. ಗ್ರಾಮಾಯಣ ಕಾದಂಬರಿಯ ಪ್ರಮುಖ ಪಾತ್ರಗಳ ಸಮೀಕ್ಷೆ ಕುರಿತು ಬರೆಯಿರಿ.
2. ಮಂಟೇಸ್ವಾಮಿ ಕಾವ್ಯದಲ್ಲಿಯ ಆತ್ಮಲಿಂಗ ಶ್ರೇಷ್ಠತೆ ಕುರಿತು ಬರೆಯಿರಿ.
3. ತುಘಲಕ್ ನಾಟಕದ ವಿಮರ್ಶೆ ಮಾಡಿ.
4. ಹುಚ್ಚುಮನಸ್ಸಿನ ಹತ್ತು ಮುಖಗಳು : ವಾಸ್ತವ ಬದುಕು ಚಿತ್ರಿಸಿ.

23/10/2020
ನಿರ್ದೇಶಕರು
ದೂರಶಿಕ್ಷಣ ನಿರ್ದೇಶನಾಲಯ